ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದು

220 - ಎಂ.ಹೆಚ್. ಜಯಪ್ರಕಾಶ್ ನಾರಾಯಣ್ (ಯಲಹಂಕ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸರ್ಕಾರದವರು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ?*

ಆ) *ಹಾಗಿದ್ದರೆ, ಈ ಬಗ್ಗೆ ಸರ್ಕಾರದವರು ಆದೇಶದ ಮುಖಾಂತರ ಎಲ್ಲಾ ಇಲಾಖೆಗಳಿಗೆ ತಿಳಿಸಲಾಗಿದೆಯೇ?*

ಇ) *ಈ ಸೂಚನೆ ಪ್ರಕಾರ ಯಾವ-ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಹುದ್ದೆಗಳು ಯಾವ ಯಾವ ವರ್ಗಗಳಲ್ಲಿ ಗೊತ್ತು ಮಾಡಲಾಗಿದೆ?*

ಈ) *ಬ್ಯಾಕ್‌ಲಾಗ್ ಹುದ್ದೆಗಳನ್ನು ಈಗಾಗಲೇ ಇಲಾಖೆಯವರು ಭರ್ತಿ ಮಾಡಿದ್ದಾರೆಯೇ? (ಈ ರೀತಿ ಭರ್ತಿ ಮಾಡಿದ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪೂರ್ಣ ಪಟ್ಟಿ ಒದಗಿಸುವುದು?*

ಉ) *ಹಾಗಿದ್ದರೆ, ಸರ್ಕಾರದವರ ಆದೇಶದಂತೆ ಮಾಡಲಾಗಿದೆಯೇ?*

ಊ) *ಭರ್ತಿ ಮಾಡದಿರುವ ಹುದ್ದೆಗಳನ್ನು ಸರ್ಕಾರದವರು ಯಾವಾಗ ಭರ್ತಿ ಮಾಡಲಾಗುವುದು?*

ಋ) *ಈ ಬಗ್ಗೆ ಸರ್ಕಾರದ ಉಚಿತ ಅಭಿಪ್ರಾಯವೇನು?*

ಶ್ರಿ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಹೌದು.

ಆ) ಹೌದು

ಇ) 'ಎ'ವರ್ಗ - 10
'ಬಿ'ವರ್ಗ - 89
'ಸಿ'ವರ್ಗ - 606
'ಡಿ'ವರ್ಗ - 160

ಈ) ಇಲಾಖಾವಾರು ಮಾಹಿತಿ ಲಭ್ಯವಿಲ್ಲ. ಒಟ್ಟು 535 ಹುದ್ದೆಗಳನ್ನು ಭರ್ತಿ ಮಾಡಿದೆ.

ಉ) ಹೌದು

ಊ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅರ್ಹ ಅಭ್ಯರ್ಥಿಗಳು ಲಭ್ಯವಾದಾಗ ಭರ್ತಿ ಮಾಡಲಾಗುವುದು.

ಋ) ಮೇಲಿನ (ಊ)ಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ನಿವೃತ್ತಿ ಸೈನಿಕರು

73 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1992 ರಿಂದ 1995ರ ಜನವರಿವರೆಗೆ ನಿವೃತ್ತಿ ಹೊಂದಿರುವ ಸೈನಿಕರ ಸಂಖ್ಯೆ ಎಷ್ಟು?*

ಆ) *ಕಾನೂನು ಅನ್ವಯ ಸರ್ಕಾರವು ಎಷ್ಟು ಜನ ಮಾಜಿ ಸೈನಿಕರಿಗೆ ಸರ್ಕಾರಿ ನೌಕರಿಯನ್ನು ಒದಗಿಸಬೇಕಾಗಿತ್ತು ಹಾಗೂ ಎಷ್ಟು ಜನರಿಗೆ ಒದಗಿಸಿದೆ?*

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು):

ಅ) 3864

ಆ) ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ರಾಜ್ಯ ಸರ್ಕಾರದ ಸೇವೆಯಲ್ಲಿ ಶೇಕಡ 10 ರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗಾಗಿ ಕಾಯ್ದಿರಿಸಲಾಗಿದೆ. ಅದೇ ರೀತಿ ಕೇಂದ್ರ ಸರ್ಕಾರ ಸೇವೆಯಲ್ಲಿಯೂ ಸಿ ಮತ್ತು ಡಿ ವರ್ಗಗಳಲ್ಲಿ ತಲಾ ಶೇಕಡ 10 ಮತ್ತು 20 ರಷ್ಟು ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಈ ರೀತಿ ಕಾಯ್ದಿರಿಸಿದ ಹುದ್ದೆಗಳನ್ನು ನಿಯತಕಾಲಿಕವಾಗಿ ನೇಮಕ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಸರ್ಕಾರಗಳು ಕಾಲಕಾಲಕ್ಕೆ ನೇಮಕಾತಿ ಮಾಡಲಾಗುತ್ತದೆ.

1995ನೇ ಜನವರಿ ಅಂತ್ಯದವರೆಗೆ 1393 ಮಾಜಿ ಸೈನಿಕರಿಗೆ ಕೇಂದ್ರ ಸರ್ಕಾರ: ರಾಜ್ಯ ಸರ್ಕಾರ ಮತ್ತು ಅವುಗಳ ಸ್ವಾಮ್ಯದಲ್ಲಿ ಬರುವ ಉದ್ದಿಮೆಗಳಲ್ಲಿ ಉದ್ಯೋಗ ಒದಗಿಸಲಾಗಿದೆ.

ದಿನಗೂಲಿ ನೌಕರರ ಬಗ್ಗೆ

72 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ 10 ವರ್ಷಗಳಿಂದ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದು ಖಾಯಂ ಆಗದೆ ಇರುವ ನೌಕರರ ಸಂಖ್ಯೆ ಎಷ್ಟು?

ಆ) ಅವರನ್ನು ಖಾಯಂ ಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಈ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ. ಅದನ್ನು ಸರ್ಕಾರದ ವಿವಿಧ ಇಲಾಖೆಗಳಿಂದ ಪಡೆದು ಸಂಗ್ರಹಿಸಲಾಗಿದೆ.

ಆ) ಸರ್ವೋನ್ನತನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 8307-11:83ರಲ್ಲಿ ದಿನಾಂಕ 23-2-90ರಂದು ನೀಡಿದ ಅಂತಿಮ ಆದೇಶದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರಂದು ಮತ್ತು ಅದಕ್ಕಿಂತ ಹಿಂದೆ ನೇಮಕಗೊಂಡ ಸಾಂದರ್ಭಿಕ:ದಿನಗೂಲಿ ನೌಕರರನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಬೇಕೆಂದು ಆದೇಶಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 2 ಎಸ್ಎಲ್ಸಿ 90, ದಿನಾಂಕ 6-8-90ನ್ನು ಹೊರಡಿಸಲಾಗಿದೆ. ಸದರಿ ಆದೇಶದ ಪ್ರಕಾರ ದಿನಾಂಕ 31-12-89ಕ್ಕೆ 10 ವರ್ಷ ಸೇವೆ ಪೂರೈಸಿದ ದಿನಗೂಲಿ ನೌಕರರನ್ನು ದಿನಾಂಕ 1-1-90ರಿಂದ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸುವಂತೆ ಹಾಗೂ ಇನ್ನುಳಿದ ಅರ್ಹ ನೌಕರರನ್ನು ಮಾಸಿಕ ವೇತನ ಸಿಬ್ಬಂದಿಗೆ ಪರಿವರ್ತಿಸಿ ಅವರುಗಳು ಯಾವಾಗ 10ವರ್ಷಗಳ ಸೇವೆಯನ್ನು ಪೂರ್ತಿಗೊಳಿಸುತ್ತಾರೆಯೋ ಆ ದಿನಾಂಕದಿಂದ ಹಂತ ಹಂತವಾಗಿ ಸಕ್ರಮಗೊಳಿಸಬೇಕು. ಸರ್ಕಾರದಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ ದಿನಾಂಕ 31-12-90 ರಿಂದ 31-12-93ರವರೆಗೆ 39,123 ದಿನಗೂಲಿ ನೌಕರರನ್ನು ಸಕ್ರಮಗೊಳಿಸಲಾಗಿದೆ. ಈ ಸಕ್ರಮಗೊಳಿಸುವ ಕ್ರಮವನ್ನು ವಿಮರ್ಶಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ.

ಕರ್ನಾಟಕದಲ್ಲಿ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ :8192:90ರ ದಿನಾಂಕ 11-4-90ರ ಮಧ್ಯಂತರ ಆದೇಶದಲ್ಲಿ 240 ದಿನಗಳ ಸತತ ಸೇವೆ ಸಲ್ಲಿಸಿರುವ